ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಆರ್‌ಎನ್‌ಎಸ್ - 19

4ನೇ ವರ್ಷ 43ನೇ ಸಂಚಿಕೆ ಕೊಪ್ಪ 6-7-1986 ಭಾನುವಾರ ಬೆಲೆ 20 ಪೈಸೆ

ಅ ಭಿ ನಂ ದ ನೀ ಯ ರು

"ಸಾಧ್ಯವಿಲ್ಲದ್ದನ್ನು ಸಾಧ್ಯವಾಗಿಸಿದ" ಈ ಐತಿಹಾಸಿಕ ಜಯಪ್ರದ ಹೋರಾಟಕ್ಕಾಗಿ ಕಾರ್ಮಿಕರು ಅತ್ಯಂತ ಅಭಿನಂದನಾರ್ಹರು. ಅವರಿಗೆ ಆಯನೂರು ಮಂಜುನಾಥ್ ಬಹಳ ಸಂದರ್ಭೋಚಿತವಾದ ಮತ್ತು ಚಾಕಚಕ್ಯತೆಯ ನಾಯಕತ್ವ ಒದಗಿಸಿದರು. ಅವರಿಗೆ ಹೆಗಲಿಗೆ ಹೆಗಲಾಗಿ ಅಧ್ಯಕ್ಷ ಪಿ.ಎಸ್. ಭಟ್, ಸಂಘದ ಪದಾಧಿಕಾರಿ ಕಾನೂನು ಸಲಹೆಗಾರರಾದ ವಕೀಲ ಹೆಚ್.ಡಿ. ನಾಯಕ್ ಮತ್ತು ನರಸಿಂಗರಾವ್, ಸಂಜೀವ ಮತ್ತಿತರ ಕಾರ್ಮಿಕ ಮುಖಂಡರು ಹಗಲಿರುಳು ಶ್ರಮಿಸಿದರು. ಇವರೆಲ್ಲರ ಒಮ್ಮನಸ್ಸಿನ ಪ್ರಯತ್ನವೂ ಅಭಿನಂದನೀಯ.

ಕಾರ್ಮಿಕ ಇಲಾಖೆ ಅಧಿಕಾರಿಗಳಾದ ಜಿ. ವೆಸ್ಲಿ ಮತ್ತು ವಿ. ಎನ್. ಹಿಟ್ಟಣಗಿ ಇವರುಗಳಂತೂ ಎಲ್ಲ ರೀತಿಯ ಪ್ರಶಂಸೆಗೆ ಪಾತ್ರರು. ಹಾಗೆಯೆ, ಮುಖಾಮುಖಿ ಸಂಧಾನದ ಮಾರ್ಗ ಎಷ್ಟು ಅಪೇಕ್ಷಣೀಯವೆಂಬುದನ್ನು ಅಂತಿಮವಾಗಿಯಾದರೂ ಅರಿತುಕೊಂಡು ಕಾಲಕ್ಕೆ ತಕ್ಕಂತೆ ತಮ್ಮ ಮನೋಭಾವ ಸುಧಾರಿಸಿಕೊಳ್ಳಲು ಸಿದ್ಧರಾದ ರಮೇಶ್ ರಾವ್‌ರವರಿಗೆ ಸಹ ಪ್ರಶಂಸೆಗಳು ಸಲ್ಲುತ್ತವೆ.

ಎಲ್ಲ ಕೊಟ್ಟು 'ಕೋಡು' ಉಳಿಸಿಕೊಂಡ ಶಂಕರ್ ಕಂಪೆನಿ ಮಾಲೀಕ ವರ್ಗ:

ಕಾರ್ಮಿಕರ ಐತಿಹಾಸಿಕ ಹೋರಾಟಕ್ಕೆ ಅಸಲಿತ ಜಯ

ಕ ಖ

ಕೊಪ್ಪ: ಶಂಕರ್ ಸಾರಿಗೆ ಸಂಸ್ಥೆಯ ಕಾರ್ಮಿಕರು ಜೂನ್ 28ರಿಂದ ಆರಂಭಿಸಿದ್ದ ಐತಿಹಾಸಿಕ ಮುಷ್ಕರ ಜುಲೈ 2ರಂದು ಬೆಳಗಿನ ಜಾವದವರೆಗೆ ನಡೆದ ಸಂಧಾನದಿಂದ ಯಶಸ್ವಿಯಾಗಿ ಕೊನೆಗೊಂಡಿತು.

ಇದರೊಂದಿಗೆ ಕಳೆದ ನಾಲ್ಕು ದಿನಗಳಿಂದ ಈ ಭಾಗದಲ್ಲಿ ಅಸ್ತವ್ಯಸ್ತಗೊಂಡಿದ್ದ ಸಂಚಾರ ವ್ಯವಸ್ಥೆ ಮಾಮೂಲು ಸ್ಥಿತಿಗೆ ಬರಲು ಹಾದಿಯಾದಂತಾಯಿತು.

ಚಿಕ್ಕಮಗಳೂರಿನ ಸಹಾಯಕ ಕಾರ್ಮಿಕ ಆಯುಕ್ತರಾದ ಜಿ. ವೆಸ್ಲಿ ಹಾಗೂ ಕಾರ್ಮಿಕ ಅಧಿಕಾರಿ ವಿ. ಎನ್. ಹಿಟ್ಟಣಗಿ ಇವರುಗಳು ಮಾಲೀಕ ವರ್ಗ ಮತ್ತು ಕಾರ್ಮಿಕ ಸಂಘದ ಪ್ರತಿನಿಧಿಗಳ ಜೊತೆ ಸಂಜೆಯಿಂದ ಬೆಳಗಿನ ಜಾವದವರೆಗೆ ಹಲವು ಸುತ್ತು ಮಾತುಕತೆ ನಡೆಸಿ, ಎರಡು ಪಕ್ಷಗಳಿಗೂ ಒಪ್ಪಿಗೆಯಾಗುವಂಥ ಒಂದು ಒಪ್ಪಂದವನ್ನು ರೂಪಿಸುವಲ್ಲಿ ಯಶಸ್ವಿಯಾದರು.

ಮುಷ್ಕರದ ಹಿನ್ನೆಲೆ

ಶಂಕರ್ ಸಾರಿಗೆ ಸಂಸ್ಥೆಯ ಕಾರ್ಮಿಕ ಸಂಘದ ಪದಾಧಿಕಾರಿಗಳಲ್ಲಿ ಹಾಲಿ ಕೊಪ್ಪದಲ್ಲಿ ಉಳಿದಿರುವ ಏಕೈಕ ಕಾರ್ಯಕರ್ತನಾಗಿದ್ದ ಹೆಚ್. ಆರ್. ಸಂಜೀವ ಎಂಬ ಗುಮಾಸ್ತರನ್ನು ಚಿಕ್ಕಮಗಳೂರಿಗೆ ವರ್ಗಾವಣೆ ಮಾಡಿದ್ದನ್ನು "ಕಾರ್ಮಿಕ ಸಂಘವನ್ನು ಮುರಿಯುವ ಕಾನೂನು ಬಾಹಿರ ತಂತ್ರ"ವೆಂದು ಪರಿಗಣಿಸಿದ ಕಾರ್ಮಿಕರು 28ರ ಬೆಳಗಿನ ಜಾವದಿಂದ ಯಾವುದೇ ಬಸ್ಸನ್ನೂ ಓಡಿಸದೆ ಮಿಂಚಿನ ಮುಷ್ಕರ ಹೂಡಿದ್ದರು. ಇದರೊಂದಿಗೆ ನೆರೆಯ ತಾಲ್ಲೂಕು ಮತ್ತು ಜಿಲ್ಲೆಗಳಲ್ಲಿ ಓಡಾಡುತ್ತಿದ್ದ ಈ ಸಂಸ್ಥೆಯ ಬಸ್ಸುಗಳೂ ಅಲ್ಲಲ್ಲೇ ನಿಂತು ಹೋಗಿದ್ದವು.

ಸುಮಾರು ಒಂದು ವರ್ಷದ ಹಿಂದೆ ಜೋಸೆಫ್ ಎಂಬ ಈ ಸಂಸ್ಥೆಯ ಡ್ರೈವರನ್ನು ಮೈಸೂರು ಪ್ಲಾಂಟೇಶನ್ ಲಾರಿಯಲ್ಲಿ ಕೆಲಸಕ್ಕೆ ಹಚ್ಚಿದ್ದಾಗ ಅವರು ಲಾರಿಯ ಕಂಡಕ್ಟರ್‌ಗೆ ಡ್ರೈವಿಂಗ್ ಕೊಟ್ಟಿದ್ದರು ಎಂಬ ಆಪಾದನೆಯ ಮೇಲೆ ನಡೆಯುತ್ತಿದ್ದ ಆಂತರಿಕ ವಿಚಾರಣೆಯಲ್ಲಿ ಮ್ಯಾನೇಜ್‌ಮೆಂಟ್ ಅನುಸರಿಸಿದ ತಂತ್ರಗಳು; ಹಾಗೂ ಈಚೆಗೆ ತೀರ್ಥಹಳ್ಳಿ ಸಮೀಪ ಟಿ. ಗೋಪಾಲ್ ಎಂಬ ಡ್ರೈವರ್ ಓಡಿಸುತ್ತಿದ್ದ ಬಸ್ಸಿನ ಆ್ಯಕ್ಸಲ್ ತುಂಡಾಗಿ ಚಕ್ರ ಉರುಳಿ ಹೋಗಿ ಪ್ರಯಾಣಿಕರಿಗೆ ಆಗಬಹುದಾಗಿದ್ದ ಅನಾಹುತವನ್ನು ಡ್ರೈವರ್ ಚಾಕಚಕ್ಯತೆಯಿಂದ ತಪ್ಪಿಸಿದ್ದರೂ ಸಂಘದಲ್ಲಿ ಚಟುವಟಿಕೆಯಿಂದಿದ್ದಾರೆಂಬ ಕಾರಣಕ್ಕೆ ಅವರನ್ನು ಶಿಕ್ಷೆಗೆ ಗುರಿಪಡಿಸುವರೆಂಬ ಶಂಕೆ-ಇವುಗಳೂ ಕಾರ್ಮಿಕರನ್ನು ಮುಷ್ಕರಕ್ಕೆ ಪ್ರಚೋದಿಸಿದ್ದ ಇನ್ನೆರಡು ಅಂಶಗಳು.

ಒ ಪ್ಪಂ ದ

ಅತಿ ಶೀಘ್ರದಲ್ಲಿ ಕೊಪ್ಪಕ್ಕೆ ವಾಪಸ್ ಕರೆಸಿಕೊಳ್ಳುವ ಖಚಿತ ಆಶ್ವಾಸನೆಯ ಮೇರೆಗೆ ಸಂಜೀವ ಚಿಕ್ಕಮಗಳೂರಿನಲ್ಲಿ ಕೆಲಸಕ್ಕೆ ಸೇರಿಕೊಳ್ಳಲು ಸಂಘವು ಸಮ್ಮತಿಸುವುದರೊಂದಿಗೆ ಒಪ್ಪಂದಕ್ಕೆ ತಳಹದಿ ಹಾಕಲಾಯಿತು. **ಇನ್ನು ಒಂದೆರಡು ದಿನದೊಳಗೆ ಅವರು ಚಿಕ್ಕಮಗಳೂರಲ್ಲಿ ಕೆಲಸಕ್ಕೆ ಹಾಜರಾಗುವುದು; ಅವರನ್ನು ಯಾವಾಗ ವಾಪಾಸು ಕರೆಸಿಕೊಳ್ಳುವುದೆಂದು ನಿರ್ಧರಿಸಲು ಕಾರ್ಮಿಕ ನಾಯಕರು ರಮೇಶರಾಯರನ್ನು ಜು.12ರಂದು ಭೇಟಿ ಮಾಡಿ ಇತ್ಯರ್ಥಗೊಳಿಸುವುದು; ಈ ಆಶ್ವಾಸನೆಯಂತೆ ಮುಷ್ಕರವನ್ನು ತತ್‌ಕ್ಷಣದಿಂದ ಹಿಂತೆಗೆದುಕೊಳ್ಳುವುದು ಮತ್ತು ಕಾರ್ಮಿಕರು ತಡ ಮಾಡದೆ ಕೇಂದ್ರ ಕಚೇರಿಯಲ್ಲಿ ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳುವುದು; ಮುಷ್ಕರದಲ್ಲಿ ಭಾಗವಹಿಸಿದ ಕಾರಣಕ್ಕೆ ಸಂಸ್ಥೆಯ ಖಾಯಂ, ಹಂಗಾಮಿ, ಕ್ಯಾಶುಯಲ್ ಇತ್ಯಾದಿ ಯಾವುದೇ ಕಾರ್ಮಿಕರನ್ನು ಶಿಕ್ಷೆಗೆ ಗುರಿಪಡಿಸಲಾಗದು; ಎಲ್ಲಾ ಶಾಖೆಯ ಕಾರ್ಮಿಕರು ಶಾಂತಿ, ಉದ್ಯಮದ ಏಳಿಗೆ, ಸೌಹಾರ್ದತೆ, ಶಿಸ್ತುಗಳನ್ನೂ ರಾಷ್ಟ್ರೀಯ ಹಿತವನ್ನೂ ದೃಷ್ಟಿಯಲ್ಲಿಟ್ಟುಕೊಳ್ಳುವುದು; ಮುಷ್ಕರ ನಡೆದ ಜೂನ್ 28ರಿಂದ ಜುಲೈ 2ರವರೆಗಿನ 5 ದಿನಗಳನ್ನು ಸೇವಾನಿರತ ದಿನಗಳಾಗಿ ಪರಿಗಣಿಸಿ, ಕಾರ್ಮಿಕರ ನಿರಂತರ ಸೇವೆಗೆ ಧಕ್ಕೆ ಬರದಂತೆ ನೋಡಿಕೊಳ್ಳುವುದು ಹಾಗೂ ಈ ಅವಧಿಗೆ 2 ದಿನದ ಸಂಬಳವನ್ನು ಎಕ್ಸ್‌ಗ್ರೇಶಿಯ ಹಣವಾಗಿ ನೀಡುವುದು—** ಒಪ್ಪಂದದ ಶರತ್ತುಗಳು.

ಒಂದು ಹಿನ್ನೋಟ

ಜೂನ್ 28ರಂದು ಮುಷ್ಕರ ಆರಂಭವಾಗಿ ಮಾತುಕತೆ ವಿಫಲವಾದ ನಂತರ ಮುಷ್ಕರ ಮುಂದುವರಿಯಿತಷ್ಟೆ. ಮರುದಿನ ಶಿವಮೊಗ್ಗದಿಂದ ಸಂಘದ ಪ್ರಧಾನ ಕಾರ್ಯದರ್ಶಿ ಮತ್ತು ಬಿ. ಎಂ. ಎಸ್. ಸಂಘಟನೆಯ ಮುಖಂಡ ಆಯನೂರು ಮಂಜುನಾಥ್ ಬಂದು ಕಾರ್ಮಿಕರ ವಿಚಾರಗಳನ್ನೆಲ್ಲ ತಿಳಿದುಕೊಂಡು ಮ್ಯಾ॥ ಡೈರೆಕ್ಟರನ್ನು ಭೇಟಿ ಮಾಡಲು ಪ್ರಯತ್ನಿಸಿದಾಗ ಅವರು ಸಿಗಲಿಲ್ಲವೆನ್ನಲಾಗಿದೆ.

ಜೂನ್ 30ರಂದು ಚಿಕ್ಕಮಗಳೂರಿನ ಸ॥ ಕಾರ್ಮಿಕ ಆಯುಕ್ತರು ಮತ್ತು ಕಾರ್ಮಿಕ ಅಧಿಕಾರಿಗಳು ಬಂದು ಸಂಧಾನ ನಡೆಸಿದರೂ ಇತ್ಯರ್ಥವಾಗದೆ ಸಂಧಾನವನ್ನು ಜುಲೈ 2ಕ್ಕೆ ಮುಂದೂಡಲಾಗಿತ್ತು.

ಈ ಮಧ್ಯೆ ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿಗಳ ಕೋರಿಕೆಯಂತೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ 15 ಬಸ್ಸುಗಳನ್ನು ಈ ಭಾಗದ ಮೂರೂ ತಾ॥ಗಳಿಗೆ ಕಳಿಸಿದ್ದು ಪ್ರಯಾಣಿಕರ ತೊಂದರೆ ನಿವಾರಣೆಗೆ ಸ್ವಲ್ಪ ಮಟ್ಟಿಗೆ ಸಹಾಯಕವಾಯಿತು.

ರಾತ್ರಿಯಿಡೀ ನಡೆದ ಸಂಧಾನ

ಜುಲೈ 2ರ ಸಂಜೆ 4 ಗಂಟೆಗೆ ಆರಂಭವಾದ ಮಾತುಕತೆಗಳು ಇಡೀ ರಾತ್ರಿ ಮುಂದುವರಿದವು. ಅಂದು ಮಧ್ಯಾಹ್ನವೇ ರಮೇಶರಾಯರನ್ನು ಆಯನೂರು ಮಂಜುನಾಥ್ ಭೇಟಿ ಮಾಡಿ ಮುಕ್ತ ಮನಸ್ಸಿನಿಂದ ಮಾತುಕತೆನಡೆಸಿದಾಗ ಸಂಧಾನ ಸೂತ್ರದ ಹತ್ತಿರ ಹತ್ತಿರ ಬಂದಿದ್ದರು. ರಾತ್ರಿ ಸಂಧಾನಾಧಿಕಾರಿಗಳೆದುರು ಮಾಲೀಕ ವರ್ಗದ ಪ್ರತಿನಿಧಿಗಳೊಂದಿಗೆ ಮಾತುಕತೆ ಮುಂದುವರಿದು ಬೆಳಗಿನ ಜಾವ 3 ಗಂಟೆಗೆ ಇತ್ಯರ್ಥವಾಗಿ, ಅದರ ಲಿಖಿತ ದಾಖಲೆಗೆ ಸಹಿಯಾಗುವಾಗ 5 ಗಂಟೆಯಾಗಿತ್ತು.

ಅಭಿನಂದನೆ, ಕೃತಜ್ಞತೆ

ಈ ಮಾತುಕತೆಗಳಲ್ಲಿ ಅತ್ಯಂತ ಪ್ರಾಮಾಣಿಕ ಕಾಳಜಿಯಿಂದ ಸಂಧಾನ ನಡೆಸಿದ ಕಾರ್ಮಿಕ ಇಲಾಖೆಯ ಇಬ್ಬರು ಅಧಿಕಾರಿಗಳಿಗೂ ಹಾಗೂ ಸೌಹಾರ್ದಯುತವಾಗಿ ಭಾಗವಹಿಸಿದ ಮಾಲೀಕ ವರ್ಗದವರಿಗೂ ವಿಶೇಷವಾಗಿ ರಮೇಶರಾವ್ ಅವರಿಗೂ ಆಯನೂರು ಮಂಜುನಾಥ್ ಹೃತ್ಪೂರ್ವಕ ಕೃತಜ್ಞತೆ ವ್ಯಕ್ತಪಡಿಸಿದ್ದಾರೆ. ಹಾಗೆಯೇ ಅತ್ಯಂತ ಶಿಸ್ತು, ಸಂಯಮ ಮತ್ತು ಒಗ್ಗಟ್ಟಿನಿಂದ ಹೋರಾಟ ನಡೆಸಿದ ಕಾರ್ಮಿಕರನ್ನು ಅವರು ತುಂಬು ಹೃದಯದಿಂದ ಅಭಿನಂದಿಸಿದ್ದಾರೆ.

ಈ ಸಂದರ್ಭದಲ್ಲಿ ಸಾರ್ವಜನಿಕರಿಗೆ ಉಂಟಾದ ಅನಾನುಕೂಲತೆಗಾಗಿ ವಿಷಾದಿಸಿರುವ ಕಾರ್ಮಿಕ ಸಂಘವು ಈ ಹೋರಾಟಕ್ಕೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಬೆಂಬಲ, ಸಹಕಾರ ನೀಡಿದ ಎಲ್ಲರಿಗೂ ಕೃತಜ್ಞತೆ ವ್ಯಕ್ತಪಡಿಸಿದೆ.

ಕೊಟ್ಟದ್ದು – ಪಡೆದದ್ದು

ಈ ಹೋರಾಟದಿಂದ ಆದ ಒಪ್ಪಂದವನ್ನು ಗಮನಿಸಿದಲ್ಲಿ ಕಾರ್ಮಿಕರಿಗೆ ನಿಃಸಂದಿಗ್ಧವಾಗಿಯೂ ಜಯ ಲಭಿಸಿದೆ. ಕಂಪೆನಿಯ ಮಾಲೀಕರು ಕಾರ್ಮಿಕರಿಗೆ ಬೇರೆಲ್ಲವನ್ನೂ ಬಿಟ್ಟುಕೊಟ್ಟು ತಮ್ಮ ಆಜ್ಞೆ ಪಾಲನೆಯಾಗಬೇಕೆಂಬ ಹಟವನ್ನು ಉಳಿಸಿಕೊಂಡಿದ್ದಾರೆ, ನಿಜ. ಆದರೆ ಕಾರ್ಮಿಕರಾದರೂ ತಮ್ಮ ಸಂಘವನ್ನು ಉಳಿಸಿಕೊಳ್ಳಲೇಬೇಕೆಂಬ ಹಟ ಹೊತ್ತು ಅದಕ್ಕಾಗಿ 'ಸಂಜೀವನ ವರ್ಗಾವಣೆ ರದ್ದಾಗಬೇಕೆಂದು ಹಟ ಹಿಡಿದವರು ಆ ಹಟವನ್ನು ಬಿಟ್ಟುಕೊಟ್ಟು, ಸಂಘವನ್ನೂ ಉಳಿಸಿಕೊಂಡಿದ್ದಾರೆ, ಸಂಜೀವನನ್ನೂ ಉಳಿಸಿಕೊಳ್ಳಲಿದ್ದಾರೆ. ಜೊತೆಗೆ "ನಿಮ್ಮ ಸಂಘವನ್ನು ನಾನು ಒಪ್ಪಿಕೊಳ್ಳುತ್ತೇನೆ. ಬಾಕಿಯಿರುವ ತುಟ್ಟಿಭತ್ಯವನ್ನು ಕೂಡಲೇ ಕೊಡಿಸುತ್ತೇನೆ" ಮುಂತಾದ ರಾಯರ ಆಶ್ವಾಸನೆಗಳಂಥ ಹಲವು ಉಡುಗೊರೆಗಳನ್ನೂ ಸಹ ಪಡೆದಿದ್ದಾರೆ. ●